# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂ.286/2018

ಸಿಡಬ್ಲ್ಯೂ-1 ಪಿಡಬ್ಲ್ಯೂ-1

ಹೆಸರು : ಅಸ್ಪಾಕ್

ತಂದೆಯ ಹೆಸರು : ಕಮಾಲಸಾಬ

ವಯಸ್ಸು : 44 ವರ್ಷ

ಉದ್ಯೋಗ : ಖಾಸಗಿ ಕೆಲಸ

ವಾಸ ಸ್ಥಳ : ಮಿಸ್ಕಿನಪುರ ಗ್ರಾಮ

ದಿನಾಂಕ 02.08.2022

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದ**

ಖಾಲೀದ ಸೈತುಲ್ಲಾ ನನ್ನ ಅಣ್ಣನ ಮಗನು ಇರುತ್ತಾನೆ. ಆತ ಈಗ ಜೀವಿತ ಇರುವುದಿಲ್ಲ. 2018 ನೆ ಇಸವಿಯಲ್ಲಿ ರಾತ್ರಿ 08.45 ಗಂಟೆಗೆ ನನಗೆ ಒಬ್ಬರೂ ಪೋನ ಮೂಲಕ ನನ್ನ ಅಣ್ಣನ ಮಗನಿಗೆ ರಂಜೋಳ ಕ್ರಾಸ್ ಹತ್ತಿರ ಅಪಘಾತವಾಗಿರುತ್ತದೆ ಅಂತಾ ತಿಳಿಸಿರುತ್ತಾರೆ. ಅಪಘಾತ ಯಾರ ತಪ್ಪಿನಿಂದ ಆಗಿರುತ್ತದೆ ಎಂದು ಗೊತ್ತಿಲ್ಲ. ವಿಷಯ ತಿಳಿದ ನಂತರ ನಾನು ಸೇಡಂ ಆಸ್ಪತ್ರೆಗೆ ಹೋಗಿರುತ್ತೇನೆ. ನನ್ನ ಅಣ್ಣನ ಮಗನಿಗೆ ಮೂಗಿನಿಂದ, ಬಾಯಿಯಿಂದ ರಕ್ತ ಬರುತ್ತಿತ್ತು. ಅವರು ಆಗ ಬದುಕಿದ್ದರೂ ನಂತರ ಅವರನ್ನು ಗುಲಬರ್ಗಾದ ಬಸವೇಶ್ವರ ಆಸ್ಪತ್ರೆಗೆ ಸೇರಿಕೆ ಮಾಡಿದ್ದು, ಆಗ ರಾತ್ರಿ 11.30 ಗಂಟೆಗೆ ಆಸ್ಪತ್ರೆಯಲ್ಲಿ ತೀರಿಕೊಂಡಿರುತ್ತಾರೆ. ಅಪಘಾತ ಯಾರ ತಪ್ಪಿನಿಂದ ಆಗಿರುತ್ತದೆ ಎಂದು ಗೊತ್ತಿಲ್ಲ. ಈಗ ತೋರಿಸುತ್ತಿರುವ ದೂರಿನ ಮೇಲಿರುವ ಸಹಿ ನನ್ನದೆ ಇರುತ್ತದೆ. ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

(**ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.**)

**ಪಾಟೀ ಸವಾಲುಃ ಸ.ಸ.ಅ. ರವರಿಂದ**

ಅಪಘಾತ ದಿನಾಂಕ 21.03.2018 ರಂದು ಆಗಿರುತ್ತದೆ ಎಂದರೆ ಸರಿ. ಆ ದಿವಸ ಸಾಯಂಕಾಲ 07.45 ಗಂಟೆಗೆ ನನ್ನ ಅಣ್ಣನ ಮಗನ ಗೆಳೆಯ ಪವನ ಇವರು ನನಗೆ ಪೋನ ಮೂಲಕ ವಿಷಯ ತಿಳಿಸಿರುತ್ತಾರೆ ಎಂದರೆ ಸರಿ. ಅವರು ಸೈತುಲ್ಲಾ, ನಯನ, ಸೊಹೇಲ, ಖಾಲೀಸೈತುಲ್ಲಾ, ರಶೀದಿ ಪಯಾಜ್ ಎಲ್ಲರೂ ತಮ್ಮ ತಮ್ಮ ಮೊಟಾರ ಸೈಕಲ ಮೇಲೆ ರಂಜೋಳ ಗ್ರಾಮಕ್ಕೆ ಹೊರಟಿದ್ದಾಗಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಮೊಟಾರ ಸೈಕಲ ನ. KA-32 EK-307 ನಡೆಸುತ್ತಿದ್ದರು ಮತ್ತು ಒಮ್ಮೇಲೆ ಮೊಟಾರ ಸೈಕಲನ್ನು ಅತೀ ವೇಗ ಮತ್ತು ನಿಷ್ಕಾಳಜೀತನದಿಂದ

ನಡೆಸಿ ರೋಡಿನ ತಗ್ಗಿನಲ್ಲಿ ತಂದು ಅಪಘಾತಪಡಿಸಿರುತ್ತಾನೆ ಎಂದು ಹೇಳಿರುತ್ತಾರೆ ಎಂದರೆ ಸರಿ. ಆಗ ಆರೋಪಿಗೂ ಸಹ ಬಲಗಡೆ ಹಣೆಗೆ, ಮುಖಕ್ಕೆ ಗಾಯಗಳಾಗಿರುವುದಾಗಿ ಹೇಳಿರುತ್ತಾರೆ ಎಂದರೆ ಸರಿ. ಅದೇರೀತಿ ಖಾಲೀದ ಸೈತುಲ್ಲಾ ಇವರಿಗೆ ಮೂಗಿನಿಂದ ರಕ್ತ ಬರುತ್ತಿದ್ದು, ಗದ್ದಕ್ಕೆ ಭಾರಿ ರಕ್ತಗಾಯವಾಗಿದ್ದು ಅವರನ್ನು ಆಸ್ಪತ್ರೆಗೆ ತೆಗೆದುಕೊಂಡು ಹೊರಟಿರುವುದಾಗಿ ಹೇಳಿರುತ್ತಾರೆ ಎಂದರೆ ಸರಿ. ಸದರಿ ವಿಷಯವನ್ನು ನಾನು ನನ್ನ ಅಣ್ಣ ಮುಕ್ತಾರ ಅಹ್ಮದ ಮತ್ತು ನನ್ನ ಹೆಂಡತಿಯಾದ ಮೇರಾಜ್ ಹಾಗೂ ಇತರಿಗೆ ತಿಳಿಸಿ ಅವರೊಂದಿಗೆ ಆಸ್ಪತ್ರೆಗೆ ಭೇಟಿ ಕೊಟ್ಟಿರುತ್ತೇನೆ ಎಂದರೆ ಸರಿ. ಅಪಘಾತ ಆರೋಪಿಯ ದುಡುಕುತನದ ಚಾಲನೆಯಿಂದಲೇ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಆರ್.ಎಮ್. ಆರೋಪಿ ಪರ ವಕೀಲರಿಂದ**

ನಿಪಿ–1 ದೂರಿನಲ್ಲಿ ಏನು ಬರೆಯಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಆರೋಪಿಯ ತಪ್ಪಿನಿಂದಲೇ ಅಪಘಾತವಾಗಿರುತ್ತದೆ ಎಂದು ನಾನು ನಿಪಿ–1 ರಲ್ಲಿ ಹೇಳಿ ಬರೆಯಿಸಿಲ್ಲ. ನಾನು ನಿಪಿ–1 ಕ್ಕೆ ಸಹಿ ಮಾಡು ಅಂದಿದ್ದರಿಂದ ಮಾತ್ರ ಸಹಿ ಮಾಡಿರುತ್ತೇನೆ ಎಂದರೆ ಸರಿ . ನಾನು ರಂಜೋಳದ ದರ್ಗಾಕ್ಕೆ ಆಗಾಗ ಭೇಟಿ ಕೊಡುತ್ತೇನೆ ಎಂದರೆ ಸರಿ. ರಸ್ತೆ ಚಿಕ್ಕ ಡಾಂಬರಿನದು ಇರುತ್ತದೆ ಎಂದರೆ ಸರಿ. ರೋಡಿನ ಎರಡು ಬಾಜುಕ್ಕೆ ಕೆಂಪು ಮಣ್ಣು ಹಾಕಿರುತ್ತಾರೆ ಎಂದರೆ ನಾನು ನೋಡಿಲ್ಲ. ಆ ರಸ್ತೆಯಲ್ಲಿ ಸಾಕಷ್ಟು ವಾಹನಗಳ ಓಡಾಟ ಇರುತ್ತದೆ ಎಂದರೆ ಸರಿ. ಎದುರಿನಿಂದ ಒಂದು ಲಾರಿ ಬರುತ್ತಿದ್ದು, ಆರೋಪಿ ಚಲಾಯಿಸುತ್ತಿದ್ದ ಮೊಟಾರ ಸೈಕಲ ಮಣ್ಣಿನಲ್ಲಿ ಸ್ಲಿಪ್ಪಾಗಿ ಬಿದ್ದು ಅಪಘಾತವಾಗಿರುತ್ತದೆ ಎಂದರೆ ನಾನು ನೋಡಿಲ್ಲ. ಅಪಘಾತದಲ್ಲಿ ಆರೋಪಿತನದು ಏನು ತಪ್ಪು ಇಲ್ಲ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ.ಸರಿ ಇದೆ.

ಸಹಿ/–

ಪ್ರ. ದ. ನ್ಯಾ. ದಂ. ಸೇಡಂ.

*SYH

# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

ಸಿ.ಸಿ. ನಂ.286/2018

ಸಿಡಬ್ಲ್ಯೂ-4 ಪಿಡಬ್ಲ್ಯೂ-2

| | | |
|---|---|---|
| ಹೆಸರು | : | ಶ್ರೀ ಸೋಯಬ್ ಮಲಿಕ್ |
| ತಂದೆಯ ಹೆಸರು | : | ಬಾಬಾಮಿಯಾ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಮೆಕ್ಯಾನಿಕ್ ಕೆಲಸ |
| ವಾಸ ಸ್ಥಳ | : | ಮೋಮಿನಪುರ ಸೇಡಂ |

ದಿನಾಂಕ 02.08.2022

ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದ</u>**

ಈಗ ತೋರಿಸುತ್ತಿರುವ ಭಾವಚಿತ್ರದಲ್ಲಿ ನಾನು ಕಾಣಿಸುತ್ತೇನೆ . ಭಾವಚಿತ್ರವನ್ನು ನಿಪಿ-2 ಎಂದು ಗುರುತಿಸಲಾಯಿತು. ನಿಪಿ-2ನ್ನು ಪಂಚನಾಮೆಯ ಕಾಲಕ್ಕೆ ತೆಗೆದಿದ್ದು ಇರುತ್ತದೆ. ಆಗ ನನ್ನೊಂದಿಗೆ ಸೈಯದ ಶಬ್ಬಿರ ಮತ್ತು ಚಾಸಾ-1 ಇದ್ದರು. ಪಂಚನಾಮೆಯನ್ನು ಪೊಲೀಸರು 2018ರಲ್ಲಿ ರಂಜೋಳ ಕ್ರಾಸ್ ಹತ್ತಿರ ಮಧ್ಯಾಹ್ನ ಮಾಡಿರುತ್ತಾರೆ. ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಪಂಚನಾಮೆಯನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಅಪಘಾತದ ಸಂಬಂಧ ಪಂಚನಾಮೆಯನ್ನು ಮಾಡಿದ್ದು, ಪೊಲೀಸರು ಅಪಘಾತವಾದ ಮೊಟಾರ ಸೈಕಲನ್ನು ಜಪ್ತು ಮಾಡಿರುತ್ತಾರೆ. ದ್ವಿಚಕ್ರ ವಾಹನದ ಸಂKA-32 307 ಆಗಿತ್ತು. ಸದರಿ ವಾಹನವನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ. ನಿಪಿ-2ರಲ್ಲಿ ವಾಹನ ಇರುತ್ತದೆ.

(**ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.**)

**<u>ಪಾಟೀ ಸವಾಲುಃ ಸ.ಸ.ಅ. ರವರಿಂದ</u>**

ಪಂಚನಾಮೆಯನ್ನು ದಿನಾಂಕ 22.03.2018 ರಂದು ಸಾಯಂಕಾಲ 05.00 ರಿಂದ 06.00 ಗಂಟೆಯವರೆಗೆ ಮಾಡಲಾಗಿರುತ್ತದೆ ಎಂದರೆ ಸರಿ. ಪಂಚನಾಮೆಯನ್ನು ಕೊಡಂಗಲ್-ಸೇಡಂ ರಂಜೋಳ ಕಡೆಗೆ ಹೋಗುವ ರಸ್ತೆಯ ಪಕ್ಕದಲ್ಲಿರುವ ರಂಜೋಳ ನಾಲಾ ಇಲ್ಲಿ ಮಾಡಲಾಗಿರುತ್ತದೆ ಎಂದರೆ ಸರಿ.

**<u>ಪಾಟೀ ಸವಾಲುಃ ಶ್ರೀ ಆರ್.ಎಮ್. ಆರೋಪಿ ಪರ ವಕೀಲರಿಂದ</u>**

ನನಗೆ ಕನ್ನಡ ಓದಲು-ಬರೆಯಲು ಬರುವುದಿಲ್ಲ. ನಾನು ಪೊಲೀಸರು ಸಹಿ ಮಾಡು ಅಂದಿದ್ದರಿಂದ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ-3ರಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ

ಎಂದರೆ ಸರಿ. ನನ್ನ ಸಮಕ್ಷಮ ಪಂಚನಾಮೆ ಮಾಡಿರುವುದಾಗಿ ಮತ್ತು ಪಂಚನಾಮೆಯ ಕಾಲಕ್ಕೆ ವಾಹನವನ್ನು ಪೊಲೀಸರು ಜಪ್ತುಪಡಿಸಿಕೊಂಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ.ಸರಿ ಇದೆ.

ಸಹಿ/-

ಪ್ರ. ದ. ನ್ಯಾ. ದಂ. ಸೇಡಂ.

*SYH

# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂ.286/2018

ಸಿಡಬ್ಲ್ಯೂ-5    ಪಿಡಬ್ಲ್ಯೂ-3

| | | |
|---|---|---|
| ಹೆಸರು | : | ಶ್ರೀ ಸೈಯದ ಶಬ್ಬಿರ |
| ತಂದೆಯ ಹೆಸರು | : | ಸೈಯದ ಹಮೀದ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ಪ್ಲಂಬರ ಕೆಲಸ |
| ವಾಸ ಸ್ಥಳ | : | ಸೇಡಂ |

ದಿನಾಂಕ 02.08.2022

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದ**

ಈಗ ತೋರಿಸುತ್ತಿರುವ ಸಹಿ ನನ್ನದೆ ಇರುತ್ತದೆ. ಸಾಕ್ಷಿ ಗುರುತಿಸಿದ ದಾಖಲೆ ಇರುವ ಸಹಿ ಪಂಚನಾಮೆಯಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ನಿಪಿ-3 ಕ್ಕೆ ರಂಜೋಳ ಕ್ರಾಸ ಹತ್ತಿರ ಸಹಿ ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ವಾಹನ ಜಪ್ತಿ ಮಾಡಿಲ್ಲ.

(**ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.**)

**ಪಾಟೀ ಸವಾಲುಃ ಸ.ಸ.ಅ. ರವರಿಂದ**

ದಿನಾಂಕ 22.03.2018 ರಂದು ಸಾಯಂಕಾಲ 05.00 ರಿಂದ 06.00 ಗಂಟೆಯವರೆಗೆ ರಂಜೋಳ ಕಡೆಗೆ ಹೋಗುವ ರಸ್ತೆಯ ಪಕ್ಕದಲ್ಲಿರುವ ರಂಜೋಳ ನಾಲಾ ಇಲ್ಲಿ ಪೊಲೀಸರು ನನ್ನ ಸಮಕ್ಷಮ ಅಪಘಾತದ ಕುರಿತು ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆಯ ಕಾಲಕ್ಕೆ ವಾಹನ ನಂ.KA-32 EK-307 ಜಪ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಭಾಗವಹಿಸಿದ್ದರೂ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)    ಓ. ಹೇ. ಕೇ.ಸರಿ ಇದೆ.

ಸಹಿ/-

ಪ್ರ. ದ. ನ್ಯಾ. ದಂ. ಸೇಡಂ.

*SYH

# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

ಸಿ.ಸಿ. ನಂ.286/2018

ಸಿಡಬ್ಲ್ಯೂ-6 ಪಿಡಬ್ಲ್ಯೂ-4

| | | |
|---|---|---|
| ಹೆಸರು | : | ಶ್ರೀಮತಿ ತಸ್ಲೀಮ್ |
| ಗಂಡನ ಹೆಸರು | : | ಶೇಖ ಮುಕ್ತಾರ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಮನೆ ಕೆಲಸ |
| ವಾಸ ಸ್ಥಳ | : | ಮಿಸ್ಕಿನಪುರ, ಸೇಡಂ |

ದಿನಾಂಕ 02.08.2022

ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದ</u>**

ಮೃತ ಖಾಲೀದ ಸೈತುಲ್ಲಾ ನನ್ನ ಮಗ ಇರುತ್ತಾನೆ. ಅವರು ರಸ್ತೆ ಅಪಘಾತದಲ್ಲಿ ತೀರಿಕೊಂಡಿದ್ದು, ಅಪಘಾತ ಹೇಗೆ ಆಯಿತು, ಯಾರ ತಪ್ಪಿನಿಂದ ಆಯಿತು ಎಂದು ನನಗೆ ಗೊತ್ತಿಲ್ಲ. ನಾನು ನನ್ನ ಮಗನನ್ನು ನೋಡಲು ಆಸ್ಪತ್ರೆಗೆ ಹೋಗಿದ್ದು ಅವರಿಗೆ ಭಾರಿ ರಕ್ತಗಾಯ ಆಗಿದ್ದವು. ನಂತರ ಕಲಬುರಗಿಯ ಬಸವೇಶ್ವರ ಆಸ್ಪತ್ರೆಗೆ ನನ್ನ ಮಗನನ್ನು ಸೇರಿಕೆ ಮಾಡಿದ್ದು, ಅಲ್ಲಿ ಆತ ತೀರಿಕೊಂಡಿರುತ್ತಾನೆ. ಆರೋಪಿಯನ್ನು ಈ ಹಿಂದೆ ಎಲ್ಲಿಯೂ ನೋಡಿಲ್ಲ. ಅಪಘಾತ ಯಾರ ತಪ್ಪಿನಿಂದ ಆಯಿತು ಎಂದು ಗೊತ್ತಿಲ್ಲ. ಅಪಘಾತದ ಕುರಿತು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**<u>ಪಾಟೀ ಸವಾಲುಃ ಸ.ಸ.ಅ. ರವರಿಂದ</u>**

ಅಪಘಾತದ ವಿಷಯ ನನಗೆ ದಿನಾಂಕ 21.03.2018 ರಂದು ನನ್ನ ಮಗನ ಗೆಳೆಯನಾದ ಪವನ ಇತನಿಂದ ಗೊತ್ತಾಗಿರುತ್ತದೆ ಎಂದರೆ ಸರಿ. ಅಪಘಾತ ಆರೋಪಿ ತಾನು ನಡೆಸುತ್ತಿದ್ದ ವಾಹನ ನಂ. KA-32 EK-307 ಅತೀ ಜೋರಿನಿಂದ ನಿಷ್ಕಾಳಜೀತನದಿಂದ ಚಲಾಯಿಸಿ ಮುನಿಮ್ ಇವರ ಹೊಲದ ಹತ್ತಿರ ಒಮ್ಮೆಲೆ ರೋಡಿನ ತಗ್ಗಿನಲ್ಲಿ ತೆಗೆದುಕೊಂಡು ಪಲ್ಟಿ ಮಾಡಿದ್ದರಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತ ಆರೋಪಿಯ ದುಡುಕುತನದ ಚಾಲನೆಯಿಂದಲೇ ಆಗಿರುತ್ತದೆ ಎಂದರೆ ಸರಿಯಲ್ಲ. ಈ ಕುರಿತು ನಾನು ಪೊಲೀಸರ ಮುಂದೆ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ-4 ಎಂದು ಗುರುತಿಸಲಾಯಿತು. ನಿಪಿ-4 ರಂತೆ ಹೇಳಿಕೆ ನೀಡಿದ್ದರೂ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ.ಸರಿ ಇದೆ.

ಸಹಿ/-

ಪ್ರ. ದ. ನ್ಯಾ. ದಂ. ಸೇಡಂ.

*SYH